ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯಂವಜನ ಸೇವಾ ರಾಜ್ಯ ಸಚಿವರು).—

ಅ) ಮಾಸಾಶನ ೨೭೯೭
ಗೌರವಧನ ೧೦೫೬
ರೂ. ೫೦೨–೦೦ರಂತೆ ೪೦೦ ವ್ಯಕ್ತಿಗಳಿಗೂ
ರೂ. ೨೫೦–೦೦ರಂತೆ ೬೫೬ ವ್ಯಕ್ತಿಗಳಿಗೂ ಮಂಜೂರು ಮಾಡಿದೆ.

ಆ) ೨೧೮.

ಇ) ಬಂದಿಲ್ಲ.

ಆರೋಗ್ಯ ಇಲಾಖೆಯಲ್ಲಿರುವ ನಿರುಪಯುಕ್ತ ವಾಹನಗಳು

೧೫೬೭. ಶ್ರೀ ಎಸ್. ನಂಜಪ್ಪ (ಕೃಷ್ಣರಾಜನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಖರೀದಿಸಿದ ಮತ್ತು ಕೊಡುಗೆಯಾಗಿ ಸ್ವೀಕರಿಸಿದ ವಾಹನಗಳ ಸಂಖ್ಯೆ ಎಷ್ಟು,

ಆ) ಈ ವಾಹನಗಳ ಪೈಕಿ ಚಾಲನೆಯಲ್ಲಿರುವ ಹಾಗೂ ಚಾಲನೆಯಲ್ಲಿಲ್ಲದ ವಾಹನಗಳ ಸಂಖ್ಯೆ ಎಷ್ಟು,

ಇ) ದುರಸ್ತಿಗಾಗಿರುವ ವಾಹನಗಳ ಸಂಖ್ಯೆ ಎಷ್ಟು ? ಮತ್ತು ದುರಸ್ತಿಗಾಗಿ ಕೈಕೊಂಡ ಕ್ರಮಗಳೇನು,

ಈ) ದುರಸ್ತಿಯಾಗದ ವಾಹನಗಳ ಬೆಲೆ ಎಷ್ಟು ? ಹಾಗೂ ಅವುಗಳನ್ನು ಹರಾಜು ಮಾಡಲಾಗುವುದೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ)	ಖರೀದಿಸಿದ ವಾಹನಗಳು ...	೨೮೫
	ಕೊಡುಗೆಯ ವಾಹನಗಳು ...	೮೯೯
ಆ)	ಚಾಲನೆಯಲ್ಲಿರುವ ವಾಹನಗಳು ...	೮೬೮
	ಚಾಲನೆಯಲ್ಲಿಲ್ಲದ ವಾಹನಗಳು ...	೩೦೬

ಇ) ೮೬. ದುರಸ್ತಿ ಕಾರ್ಯಗಾರಗಳೊಂದಿಗೆ ಸಮಾಲೋಚನೆ ಕ್ರಮವನ್ನು ಕೈಗೊಳ್ಳಲಾಗುವುದು.

ಈ) ಇದರ ಅಂದಾಜನ್ನು ಮಾಡಲಾಗುತ್ತದೆ. ಹೌದು.

ಸಾರ್ವತ್ರಿಕ ಆಸ್ಪತ್ರೆ ಸವದತ್ತಿ

೧೪೨೫. ಶ್ರೀ ಚಂದ್ರಶೇಖರ ಮಾಮನಿ (ಪರಸಗಡ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸವದತ್ತಿ ಸಾರ್ವತ್ರಿಕ ಆಸ್ಪತ್ರೆಯು ೫೦ ಹಾಸಿಗೆ ಹೊಂದಿದ್ದು ಅದನ್ನು ೧೦೦ ಹಾಸಿಗೆಗೆ ಏರಿಸುವ ವಿಚಾರ ಸರ್ಕಾರಕ್ಕೆ ಇದೆಯೆ,

ಆ) ಹಾಗಿದ್ದಲ್ಲಿ ಯಾವಾಗ,

ಇ) ಸದರಿ ಆಸ್ಪತ್ರೆಯಲ್ಲಿ ರಾಜ್ಯದ ಉಳಿದ ಸಾರ್ವತ್ರಿಕ ಆಸ್ಪತ್ರೆಗಳಿಗಿಂತ ಕಡಿಮೆ ಸಂಖ್ಯೆಯ ಸಿಬ್ಬಂದಿ ವರ್ಗದವರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,